**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ ಕುಮಟಾ**

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ – 2069/2023

| | |
|---|---|
| 1 ನೇ ಆರೋಪಿಯ ಹೆಸರು | ಗಣಪತಿ ರಾಮಾ ಮರಾಠಿ |
| ವಯಸ್ಸು | ಸುಮಾರು 31 ವರ್ಷ |
| ವಾಸ್ತವ್ಯಃ | ಉಳ್ಳೂರುಮಠ, ಕುಮಟಾ |
| 2 ನೇ ಆರೋಪಿಯ ಹೆಸರು | ವಿನಾಯಕ ರಾಮಾ ಮರಾಠಿ |
| ವಯಸ್ಸು | ಸುಮಾರು  35 ವರ್ಷ |
| ವಾಸ್ತವ್ಯಃ | ಉಳ್ಳೂರುಮಠ, ಕುಮಟಾ |
| 3 ನೇ ಆರೋಪಿಯ ಹೆಸರು | ನಾರಾಯಣ ರಾಮಾ ಮರಾಠಿ |
| ವಯಸ್ಸು | ಸುಮಾರು 33 ವರ್ಷ |
| ವಾಸ್ತವ್ಯಃ | ಉಳ್ಳೂರುಮಠ, ಕುಮಟಾ |
| 4 ನೇ ಆರೋಪಿಯ ಹೆಸರು | ವಿಷ್ಣು ಪಿಲ್ಲು ಮಾರಾಠಿ |
| ವಯಸ್ಸು | ಸುಮಾರು 30 ವರ್ಷ |
| ವಾಸ್ತವ್ಯಃ | ಉಳ್ಳೂರುಮಠ, ಕುಮಟಾ |

**ದಿನಾಂಕ** 5.2.2024

**ದಂಡ ಪ್ರಕ್ರಿಯಾ ಸಂಹಿತೆ ಕಲಂ 251 ರನ್ವಯ ಆಪಾದನೆ**

ಕುಮಟಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಕುಮಟಾ ತಾಲೂಕು ಊಳ್ಳುರುಮಠ ಊರಿನ ನಿವಾಸಿಯಾದ ಆರೋಪಿತರಾದ ನಿಮಗೆ ಮತ್ತು ಪಿರ್ಯಾದಿಯವರಿಗೆ ಮೊದಲಿನಿಂದಲೂ ಊರಿನಲ್ಲಿ ತಿರುಗಾಡುವ ವಿಚಾರದಲ್ಲಿ ತಂಟೆ ತಕರಾರು ಆಗಿ ದ್ವೇಷದಿಂದ ಇದ್ದವರು, ದಿಃ **28.9.2023** ರಂದು ಸಾಯಂಕಾಲ **7.15** ಗಂಟೆಯ ಸುಮಾರಿಗೆ ಪಿರ್ಯಾದಿಯವರು ಸಾಕ್ಷಿದಾರ **4** ನೇಯವರೊಂದಿಗೆ ಊಳ್ಳುರುಮಠ ಮಾಸ್ತಿಕಟ್ಟೆ ದೇವಸ್ಥಾನದ ಹತ್ತಿರ ಮಾತನಾಡುತ್ತಾ ನಿಂತು ಕೊಂಡಿದ್ದಾಗ, ಆರೋಪಿತರಾದ ನೀವು ತಕ್ಷೀರು ಸಮಾನ ಉದ್ದೇದಿಂದ, ಪಿರ್ಯಾದಿಯವರನ್ನು ಅಡ್ಡಗಟ್ಟಿ ತಡೆಗಟ್ಟಿದ್ದು, ಆ ಮೂಲಕ ಭಾ.ದಂ.ಸಂ.ಕಲಂ **341 ಸಹವಾಚಕ ಕಲಂ  34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ .

ಮೇಲೆ  ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ತಕ್ಷೀರು ಸಮಾನ ಉದ್ದೇಶದಿಂದ, ಪಿರ್ಯಾದಿಯವರನ್ನುದ್ದೇಶಿಸಿ ಬೋಳಿಮಗನೇ,

ಸೂಳಾಮಗನೇ ಊರಿನನಲ್ಲಿ ನಿಂದು ಬಹಳ ಆಗಿದೆ ಅಂತಾ ಅವಾಚ್ಯ ಶಬ್ದದಿಂದ ಬೈದಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 504 **ಸಹವಾಚಕ ಕಲಂ** 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ .

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ತಕ್ಷೀರು ಸಮಾನ ಉದ್ದೇಶದಿಂದ, ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀವು ಕತ್ತಿಯಿಂದ ಪಿರ್ಯಾದಿಯವರ ತಲೆಗೆ ಹಾಗೂ 2 ನೇ ಆರೋಪಿಯಾದ ನೀವು ದೊಣ್ಣೆಯಿಂದ ಪಿರ್ಯಾದಿಯವರ ತಲೆಗೆ, ಎಡಕೈಗೆ ಹಾಗೂ 3 ನೇ ಆರೋಪಿಯಾದ ನೀವು ಕಲ್ಲಿನಿಂದ ಪಿರ್ಯಾದಿಯವರ ಬಲಗಾಲಿಗೆ ಹೊಡೆದು ಹಲ್ಲೆ ಮಾಡಿದ್ದಲ್ಲದೇ ತಪ್ಪಿಸಲು ಬಂದ ಸಾಕ್ಷಿದಾರ 4 ನೇಯವರಿಗೂ 1 ನೇ ಆರೋಪಿಯಾದ ನೀವು ಕತ್ತಿಯಿಂದ ಎಡ ಭುಜಕ್ಕೆ ಹಾಗೂ 4 ನೇ ಆರೋಪಿಯಾದ ನೀವು ರಾಡಿನಿಂದ ತಲೆಗೆ, ಎಡದವಡೆಗೆ, ಎಡಕೈಗೆ ಮಣಿಕಟ್ಟಿಗೆ ಹೊಡೆದು ಹಲ್ಲೆ ಮಾಡಿ ಸಾದಾ ಸ್ವರೂಪದ ಗಾಯ ನೋವು ಪಡಿಸಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 324 **ಸಹವಾಚಕ ಕಲಂ** 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ .

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ತಕ್ಷೀರು ಸಮಾನ ಉದ್ದೇಶದಿಂದ, ಪಿರ್ಯಾದಿಯವರಿಗೆ ಕೊಲೆ ಮಾಡುತ್ತೇವೆ ಅಂತಾ ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 506 **ಸಹವಾಚಕ ಕಲಂ** 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ .

ಪ್ರಶ್ನೆ ನಂ.1 ಈಗ ನಿಮಗೆ ಓದಿ ಹೇಳಿದ ಅಪಾದನೆಯು ತಿಳಿಯಿತೇ?

1 ನೇ ಆರೋಪಿಯ ಉತ್ತರ –

2 ನೇ ಆರೋಪಿಯ ಉತ್ತರ –

3 ನೇ ಆರೋಪಿಯ ಉತ್ತರ –

4 ನೇ ಆರೋಪಿಯ ಉತ್ತರ –

ಪ್ರಶ್ನೆ ನಂ.2– ನೀವು ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತೀರಾ? ಅಥವಾ ನಿಮ್ಮ ಬಳಿ ಪ್ರತಿರಕ್ಷೆ ಇದೆಯೆ?

1 ನೇ ಆರೋಪಿಯ ಉತ್ತರ –

2 ನೇ ಆರೋಪಿಯ ಉತ್ತರ –

3 ನೇ ಆರೋಪಿಯ ಉತ್ತರ –

4 ನೇ ಆರೋಪಿಯ ಉತ್ತರ –

ಮೇಲಿನ ಆಪಾದನೆಯನ್ನು ಆರೋಪಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ ತಿಳಿಸಿ ಹೇಳಿ ಆರೋಪಿತರು ಉತ್ತರಿಸಿದ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬರೆದುಕೊಡಂದ್ದಾಗಿದೆಯೆಂದು ನಾನು ಈ ಮೂಲ ದೃಢಿಕರಿಸುತ್ತೇನೆ.

ಸಹಿ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.**
**ಕುಮಟಾ**